.12
1

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1080 (1038)**
ಸದಸ್ಯರ ಹೆಸರು : ಶ್ರೀ ಬಿ.ಕೆ ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 17.03.2025
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| | ಪ್ರಶ್ನೆ | ಉತ್ತರ |
|---|---|---|
| ಅ. | ಕೇಂದ್ರ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇವರ ಆದೇಶ ದಿನಾಂಕ: 23.04.2024 ರನ್ವಯ ಬೆಂಗಳೂರು ನಗರ ಉಪ ವಿಭಾಗ, ಬೆಂಗಳೂರು ಇಲ್ಲಿನ ಡಿಸಿಎಫ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್‌ಎಫ್‌ಎಸ್ ಅಧಿಕಾರಿಯು ನಿಯಮಾನುಸಾರ ಅನರ್ಹರೆಂದು ತಿಳಿಸಿ ಅವರನ್ನು ಕೂಡಲೇ ಬದಲಾಯಿಸಿ ಸದರಿ ಹುದ್ದೆಗೆ ಅರ್ಹ ಅಧಿಕಾರಿಯನ್ನು ನೇಮಿಸುವಂತೆ ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ. | ಹಾಗಾದರೆ ಸದರಿ ಅಧಿಕಾರಿಯನ್ನು ಈ ರೀತಿ ಕಾನೂನು ಬಾಹಿರವಾಗಿ ನೇಮಿಸಲು ಕಾರಣಗಳೇನು; (ವಿವರ ನೀಡುವುದು) | ಐಎಫ್‌ಎಸ್ ವೃಂದದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಐಎಫ್‌ಎಸ್ ಅಧಿಕಾರಿಗಳು ಕಡಿಮೆಯಿರುವುದರಿಂದ ಸದರಿ ವೃಂದದ ಹುದ್ದೆಗಳನ್ನು ನಿಮ್ನೀಕರಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಕೆಲವು ಐಎಫ್‌ಎಸ್ ಅಧಿಕಾರಿಗಳನ್ನು ಸ್ಥಳನಿಯುಕ್ತಿಗೊಳಿಸಲಾಗಿರುವ ಹಿನ್ನೆಲೆಯಲ್ಲಿ ಐಎಫ್‌ಎಸ್‌ನ ಉಪ ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಸಹ ಅಧಿಕಾರಿಗಳು ಕಡಿಮೆಯಾಗಿರುವುದರಿಂದ ಕೆಲವು ಎಸ್‌ಎಫ್‌ಎಸ್ ವೃಂದದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಐಎಫ್‌ಎಸ್‌ನ ಉಪ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳಿಗೆ ನೇಮಿಸಲಾಗಿರುತ್ತದೆ.<br><br>ಮುಂದುವರೆದು, ಐಎಫ್‌ಎಸ್ ಕೇಡರ್ ನಿಯಮಗಳಲ್ಲಿ ತಾತ್ಕಾಲಿಕವಾಗಿ ಎಸ್‌ಎಫ್‌ಎಸ್ ಅಧಿಕಾರಿಗಳನ್ನು ಐಎಫ್‌ಎಸ್ ಕೇಡರ್ ಹುದ್ದೆಗಳಿಗೆ ನೇಮಿಸಲು ಅವಕಾಶವಿರುತ್ತದೆ. |

| | | |
|---|---|---|
| ಇ. | ಕೇಂದ್ರ ಆಡಳಿತ ನ್ಯಾಯಮಂಡಳಿ ಬೆಂಗಳೂರು ಇವರ ಆದೇಶ ದಿನಾಂಕ: 23.04.2024 ರನ್ವಯ ನಾಲ್ಕು ವಾರಗಳ ಗಡುವು ನೀಡಿದ್ದರೂ ಇದುವರೆವಿಗೂ ಸದರಿ ಅಧಿಕಾರಿಯನ್ನು ಬದಲಾವಣೆ ಮಾಡದೆ ಇರಲು ಕಾರಣಗಳೇನು; (ವಿವರ ನೀಡುವುದು) | ಈ ಬಗ್ಗೆ ಕ್ರಮವಹಿಸಲು ಪರಿಶೀಲಿಸಲಾಗುತ್ತಿದೆ. |
| ಈ. | ಸದರಿ ಅಧಿಕಾರಿಯನ್ನು ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಯಿಂದ ಬಿಡುಗಡೆಗೊಳಿಸಲಾಗುವುದು? | |

DPAR-SFP/51/2025

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**